ಅ) ಲಾರಿಗಳು ಕಾನೂನು ಬಾಹಿರವಾಗಿ ಅತಿ ಹೆಚ್ಚು ತೂಕದ ಮರಳನ್ನು ತುಂಬಿಕೊಂಡು ರಸ್ತೆಯಲ್ಲಿ ಸಂಚರಿಸುತ್ತಿರುವುದರಿಂದ ರಸ್ತೆಯು ಹದಗೆಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಯು ಆಂಧ್ರದ ಗಡಿಯಿಂದ ಬೆಂಗಳೂರಿಗೆ ಸಂಪರ್ಕವನ್ನು ಕಲ್ಪಿಸುತ್ತಿರುವುದರಿಂದ ಇತರೆ ಚಿಕ್ಕ ವಾಹನಗಳು ಮತ್ತು ಬಸ್ಸುಗಳು ಓಡಾಡಲು ತೊಂದರೆಯಾಗುತ್ತಿದ್ದು, ಸಾರ್ವಜನಿಕರಿಗೆ ಇದರಿಂದ ಕಿರುಕುಳವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ನಾದುರಸ್ತಿಯಾಗಿರುವ ರಸ್ತೆಯನ್ನು ಡಾಂಬರೀಕರಣ ಮಾಡಲು ಸರ್ಕಾರದ ಗಮನ ಸೆಳೆದಿದ್ದರೂ ಕೂಡ ಏನೂ ಕ್ರಮ ಕೈಗೊಳ್ಳದಿರುವುದು ಸರಿಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಲಭ್ಯವಿರುವ ಅನುದಾನದಲ್ಲಿ ಈ ಜಿಲ್ಲಾ ಮುಖ್ಯ ರಸ್ತೆಯನ್ನು ದುರಸ್ತಿಗೊಳಿಸಿ ವಾಹನ ಸಂಚಾರಕ್ಕೆ ಯೋಗ್ಯವಾಗಿ ಇಡಲಾಗುತ್ತಿದೆ.

ಸರ್ಕಾರಿ ರಸ್ತೆ ಮತ್ತು ಓಣಿಯ ಒತ್ತುವರಿ

44 (142) ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚೇಳೂರು ಮಿಟ್ಟಿಮರಿ ರಸ್ತೆಯ ಪಾಳ್ಯಕೆರೆ ಬಳಿ ಸೇತುವೆ ಇಲ್ಲದೆ ವಾಹನ ಸಂಚಾರಕ್ಕೆ ತೊಂದರೆಯುಂಟಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪಾಳ್ಯಕೆರೆ ಬಳಿ ರಸ್ತೆಗೆ ಮಾಡಿರತಕ್ಕಂತಹ ಕಾಸ್‌ವೇ ಉಪಯೋಗಕ್ಕೆ ಬಾರದೇ ಸಾರ್ವಜನಿಕರ ವಾಹನ ಸಂಚಾರಕ್ಕೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಕಾಸ್‌ವೇ ಬದಲಿಗೆ ಸೇತುವೆ ನಿರ್ಮಾಣವನ್ನು ಸರ್ಕಾರ ಕೈಗೊಳ್ಳುತ್ತದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಬಂದಿರುತ್ತದೆ.

ಆ) ಬಂದಿರುತ್ತದೆ.

ಇ) ಜಿಲ್ಲಾ ಮುಖ್ಯ ರಸ್ತೆ ಮೇಲಿನ ಈ ಕಾಸ್‌ವೇಗೆ ಬದಲು ಸೇತುವೆ ನಿರ್ಮಿಸಲು ಅನುದಾನದ ಲಭ್ಯತೆ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಸರ್ಕಾರಿ ಜಮೀನಿನಲ್ಲಿ ಅಕ್ರಮ ಸಾಗುವಳಿ

46 (134) ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿರುವ ಅನೇಕ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ಕಾರ್ಕಳ ತಾಲ್ಲೂಕಿನಲ್ಲಿರುವ ಕೂಡ್ಲು ತೀರ್ಥ, ಜೋಮು ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಸಹ ಸೇರಿದೆಯೇ?

ಇ) ಉಡುಪಿ ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳು ಯಾವುವು; ಮತ್ತು ಅವುಗಳ ಅಭಿವೃದ್ಧಿ ಯೋಜನೆಗಳು ಯಾವುವು? (ವಿವರ ಒದಗಿಸುವುದು)

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ) ಇದೆ.

ಆ) ಜೋಮು ಪ್ರದೇಶವನ್ನು ಸೇರಿಸಿರುವುದಿಲ್ಲ.

ಇ) ಪ್ರವಾಸಿ ತಾಣಗಳು	ಅಭಿವೃದ್ಧಿ ಯೋಜನೆಗಳು
1. ಕಾರ್ಕಳ	
2. ಉಡುಪಿ	ಯಾತ್ರಿ ನಿವಾಸ
3. ಮಲ್ಪೆ	ಹೊನಲು ಬೆಳಕು
4. ಸೇಂಟ್ ಮೇರಿಸ್ ಐಲ್ಯಾಂಡ್	
5. ಕುಂದಾಪುರ	
6. ಮರವಂತೆ	ಹೊನಲು ಬೆಳಕು
7. ಕೊಲ್ಲೂರು	
8. ಬೈಂದೂರು	
9. ಹರಿಶಿಣಗುಂಡಿ ಜಲಪಾತ	
10. ಪಾಜಕ ಕ್ಷೇತ್ರ	ಪ್ರವಾಸಿ ಕುಟೀರಗಳು
11. ಕಾಪು	

ರಾಷ್ಟ್ರೀಯ ಕುಟುಂಬ ಕಲ್ಯಾಣ ನಿಧಿಯ ಮಂಜೂರಾತಿ

47 (329) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಷ್ಟ್ರೀಯ ಕುಟುಂಬ ಕಲ್ಯಾಣ ನಿಧಿ ಅಡಿಯಲ್ಲಿ ಕುಂದಾಪುರ ತಾಲ್ಲೂಕಿನಲ್ಲಿ ಎಷ್ಟು ಪ್ರಕರಣಗಳು ಮಂಜೂರಾಗಿವೆ;

ಆ) ಫಲಾನುಭವಿಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಬಿಡುಗಡೆಯಾದ ಹಣದಲ್ಲಿ ಎಷ್ಟು ಫಲಾನುಭವಿಗಳಿಗೆ ಪಾವತಿ ಆಗಿದೆ;

ಇ) ಮಂಜೂರಾತಿಗಾಗಿ ಎಷ್ಟು ಅರ್ಜಿಗಳು ಬಾಕಿ ಇವೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) 1996-97ನೇ ಸಾಲಿನಿಂದ 2003ನೇ ಜನವರಿಯವರೆಗೆ ರಾಷ್ಟ್ರೀಯ ಕುಟುಂಬ ಸಹಾಯ ಧನ ಯೋಜನೆಯಡಿ ಕುಂದಾಪುರ ತಾಲ್ಲೂಕಿನಲ್ಲಿ 430 ಪ್ರಕರಣಗಳು ಮಂಜೂರಾಗಿದೆ.

ಆ) ಉಡುಪಿ ಜಿಲ್ಲೆಯ ಮೂರು ತಾಲ್ಲೂಕುಗಳಿಗೆ ಒಟ್ಟು ಇದುವರೆಗೆ 87,02,000-00 ರೂ.ಗಳ ಅನುದಾನ ಬಿಡುಗಡೆಯಾಗಿದ್ದು ಇದರಲ್ಲಿ ಕುಂದಾಪುರ ತಾಲ್ಲೂಕಿನ 430 ಪ್ರಕರಣಗಳಲ್ಲಿ 24,65,000.00 ರೂ. ಗಳು ಪಾವತಿಯಾಗಿವೆ.

ಇ) ಕುಂದಾಪುರ ತಾಲ್ಲೂಕಿಗೆ ಸಂಬಂಧಿಸಿದಂತೆ ಜೂನ್ 2000 ರಿಂದ ಜನವರಿ 2003ರ ಅವಧಿಯ 993 ಮಂಜೂರಾತಿಗೆ ಅರ್ಹವಾದ ಅರ್ಜಿಗಳು ಬಾಕಿ ಇರುತ್ತದೆ.